ಕಾಣದ ಒರಟಾದ ಕಾಲುಗಳು, ಕುರುಚಲು ಗಡ್ಡವಿದ್ದ ಮುಖ, ಆದರೂ ಅವನಲ್ಲಿ ಯಾವುದೇ ಅಪರಾಧಿ ಪ್ರಜ್ಞೆ ಇಲ್ಲದ್ದನ್ನು ನನ್ನ ಕಣ್ಣುಗಳು ಗುರುತಿಸಿದವು. ನನ್ನ ಎದೆಯೊಳಗೆ ನಾಟಿದ್ದ ಅಂದಿನ ನೆನಪಿನ ನೆಗ್ಗಲುಮುಳ್ಳು ಏಕೋ ಬಲುಜೋರಾಗಿ ನನ್ನ ಹೃದಯವನ್ನು ನೋವು ಮಾಡಿತು.

'ಯಾರ್ರಿ ಇವರು?' ನೇಮಯ್ಯನನ್ನು ಕೇಳಿದೆ.

'ಮೇಡಮ್ ಇವನು ಜಯರಾಮ ಅಂತ ಇಲ್ಲಿಯವನೇ. ಕಳ್ಳತನದಲ್ಲಿ ಎತ್ತಿದ ಕೈ ಇವನು. ಸಂತೆ ಮೈದಾನದಲ್ಲಿ ನಮ್ಮ ಕೈಗೆ ಸಿಕ್ಕಿಕೊಂಡ. ಎಳೆದುಕೊಂಡು ಬಂದ್ವಿ!' ಎಂದರು ನೇಮಯ್ಯ.

ಒಂದು ಸಾರಿ ಅವನನ್ನು ಮೇಲಿನಿಂದ ಕೆಳಗಿನವರೆಗೆ ಅಳೆದು ನೋಡಿದೆ. ನನಗೆ ಇವನೇ ಆ ಜಯರಾಮ ಎಂಬುವುದು ಖಾತರಿಯಾಗಿಹೋಯ್ತು. ಏನೋ ಸಂಕಟ, ಏನೋ ಕಳವಳ ನನ್ನ ಬುದ್ಧಿಯನ್ನು ಮಸುಕುಗೊಳಿಸಿದವು. ಎಲ್ಲರಿಗಿಂತಲೂ ಬುದ್ಧಿವಂತ ವಿದ್ಯಾರ್ಥಿಯಾಗಿದ್ದ ಜಯರಾಮ ಇಂತಹ ಕೆಲಸಕ್ಕೆ ಏಕೆ ಇಳಿದ? ಇವನ ಕುಟುಂಬ ಏನಾಯಿತು? ಈ ಸಮಾಜ ಸ್ವಲ್ಪಮಟ್ಟಿನ ಉದಾರತೆಯನ್ನು ತೋರಿದ್ದರೆ, ಇಂದು ಅವನು ಗೌರವಾರ್ಹ ಬದುಕನ್ನು ನಡೆಸುವ ವ್ಯಕ್ತಿಯಾಗುತ್ತಿದ್ದನಲ್ಲವೆ? ಎಲ್ಲ ಪ್ರಶ್ನೆಗಳೂ ಹೊರಬಂದವು.

'ಮೇಡಮ್, ಕಳ್ಳ ಜಯರಾಮ ಅಂತ ಎಲ್ಲರೂ ಇವನ ಕರಿತಾರೆ. ಇವನು ನಮ್ಮ ಸ್ಟೇಷನ್‌ಗೆ ಖಾಯಂ ಗಿರಾಕಿ. ತಿಂಗಳಿಗೊಂದು ಸಲವಾದರೂ ನಮ್ಮ ಕೈಗೆ ಸಿಕ್ಕಿಕೊಳ್ಳುತ್ತಾನೆ. ಅವನಿಗೆ ಹೊಡೆದು, ಬಡಿದು ಹೇಳಿದ್ದೇವೆ. ಆದರೂ ಇವನೇನೂ ಸುಧಾರಿಸಿಕೊಳ್ಳುವ ವ್ಯಕ್ತಿಯಲ್ಲ!' ಎಂದರು ಹೆಡ್‌ಕಾನ್‌ಸ್ಟೇಬಲ್ ನೇಮಯ್ಯ.

'ನೀವೂ ಅವನನ್ನು ಕಳ್ಳ ಜಯರಾಮ ಅಂತ ಕರೀಬೇಡಿ ನೇಮಯ್ಯ' ಎಂದೆ. ನೇಮಯ್ಯ ತಲೆತಗ್ಗಿಸಿದರು.

ಅವನನ್ನೊಮ್ಮೆ ದಿಟ್ಟಿಸಿನೋಡಿದೆ. ನೀರಿಲ್ಲದ ಒಣಗಿದ ಬಾಳೆಕಂದಿನಂತೆ ಬತ್ತಿಹೋಗಿದ್ದ ಅವನ ದೇಹ. ಎಲ್ಲಕ್ಕಿಂತ ಹೆಚ್ಚಾಗಿ ಆಸೆಯೇ ಬತ್ತಿಹೋಗಿದ್ದ ಅವನ ಕಣ್ಣುಗಳು ನನ್ನನ್ನು ಕಲಕಿದವು.

'ಇವರ ಮೇಲೆ ಬೇರೆ ಯಾವುದಾದರೂ ಕ್ರಿಮಿನಲ್ ಕೇಸ್‌ಗಳು ಇವೆಯೇನ್ರಿ?'

'ಇಲ್ಲ ಮೇಡಮ್. ಎಲ್ಲವೂ ಲೋಕಲ್ ಪಿಟಿ ಕೇಸ್‌ಗಳು ಅಷ್ಟೆ!'

ನನ್ನ ಕಣ್ಣಮುಂದೆ ನಿಂತಿದ್ದ ಈ ಮಾನವಾಕಾರ ಅಂದು ಜನಜಂಗುಳಿಯ ನಡುವೆ ನಾನು ನೋಡಿದ್ದ ದೊಡ್ಡಹನುಮನ ಮತ್ತೊಂದು ರೂಪದಂತೆ ಇತ್ತು. 'ಜಯರಾಮ, ಹೀಗೆ ಮೋಸದಿಂದ ದೋಚುವ ಕೆಲಸವನ್ನೇ ಏಕೆ ಆರಿಸಿಕೊಂಡೆ?' ಎಂದು ಒರಟಾಗಿಯೇ ಕೇಳಿದೆ. 'ನಿನ್ನ ಹಿನ್ನೆಲೆಯೆಲ್ಲವೂ ನನಗೆ ಗೊತ್ತು!' ಎನ್ನುವ ಧಿಮಾಕು ನನ್ನ ಮಾತುಗಳಲ್ಲಿ ನನಗರಿವಿಲ್ಲದಂತೆಯೇ ಇಣಕಿತ್ತು. ಕೂಡಲೇ ಎಚ್ಚೆತ್ತು ನನ್ನ ಧ್ವನಿಯನ್ನು ಬದಲಿಸಿಕೊಂಡೆ.

'ಮೇಡಮ್, ನನಗೂ ಬೇರೆ ಕೆಲಸ ಮಾಡಿ ಬದುಕುವಾಸೆ ಇತ್ತು. ಆದರೆ, ನಮಗೆ ಯಾರೂ ಕೆಲಸ ಕೊಡೊಲ್ಲ! ನಮ್ಮನ್ನು ಮನೆ ಹತ್ತಿರನೂ ಸೇರಿಸೋಲ್ಲ! ಕೊನೆಗೆ ಬಂಡೆ ಬಯಲಿನಿಂದ ರಂಗೋಲಿ ತಂದು ಬೀದಿ ಬೀದಿ ಅಲೆದು ಮಾರಿದೆ, ಯಾವುದೋ ಮನೆಯವರು ಒಂದು ದಿನ, ನಮ್ಮ ಮನೆ ಮುಂದೆ ಒಣಗಿಹಾಕಿದ ಬಟ್ಟೆ ಕದಿಯೋಕೆ ಬರುತ್ತೀಯಾ ಎಂದು ಬಾಯಿಗೆ ಬಂದ ಹಾಗೆ ಬಯ್ದರು. ಅದನ್ನು ಬಿಟ್ಟೆ. ಅದಾದಮೇಲೆ ಬಿದಿರಿನ ಮೊರ ಬಳಿದುಕೊಡ್ತೀನಿ ಅಂತ ತಲೆಮೇಲೆ ಗಂಜಿ ಹೊತ್ತು ಇದೇ ಊರಿನಲ್ಲಿ ಬೀದಿ ಬೀದಿ ಅಲೆದೆ. ಅದೂ ಕೈಯುತ್ತಲಿಲ್ಲ! ಮತ್ತೆ ಯಾವುದೋ ಮಂಡಿಯಲ್ಲಿ ಶೇಂಗಾ ಲೋಡು ಮಾಡೋ ಕೆಲಸಕ್ಕೆ ಸೇರಿಕೊಂಡೆ. ಅಲ್ಲಿನ ಡ್ರೈವರ್ ಶೇಂಗಾಬೀಜ ಕದ್ದು, ನನ್ನ ಮೇಲೆ ಕಳ್ಳತನದ ಆರೋಪ ಬರುವಂತೆ ಮಾಡಿದ. ಅವನ ಮಾತು ಕೇಳಿ ಮಂಡಿ ಯಜಮಾನರು ನನ್ನನ್ನು ಕೆಲಸದಿಂದ ತಗೆದರು. ನಮ್ಮ ಮನೆ ದೇವ್ರು ಸತ್ತಮ್ಮನ ಮೇಲಾಣೆ ಈಗಲೂ ಹೇಳ್ತೀನಿ, ನಾನು ಕದ್ದಿರಲಿಲ್ಲ! ಕೆಲವಾರು ಕಡೆ ಇದೇ ಅನುಭವವಾಯಿತು. ಯಾರೋ ಮಾಡಿದ ಕಳ್ಳತನಕ್ಕೆ ನಾನು ಪೊಲೀಸ್ ಸ್ಟೇಷನ್ ನೋಡಬೇಕಾಗಿ ಬರ್‍ತಿತ್ತು. ಇಂಥ ಹತ್ತಾರು ಕೇಸುಗಳು ನನ್ನಮೇಲೆ ಇವೆ! ಇದೆಲ್ಲಾ ಅನುಭವಿಸಿ, ಅನುಭವಿಸಿ ರೋಸಿಹೋಗಿತ್ತು ನನಗೆ' ಎಂದ. ಪ್ರತೀಕಾರ ಮತ್ತು ದ್ವೇಷವಿಲ್ಲದ ಮಂಜುಗಡ್ಡೆಯಂತಿದ್ದ ಅವನ ಮಾತುಗಳು ನಿರ್ಭಾವುಕವಾಗಿದ್ದವು. ಜಯರಾಮ ಛಾವಣಿಯನ್ನು ದಿಟ್ಟಿಸುತ್ತಾ ನಿಂತಿದ್ದ.